Sri A. P. APPANNA (Deputy Minister for Industries).—

(*a*) Occurrence of lime kankar in Begoor has been known to the Mines and Geology Department.

(*b*) Yes. The Department of Mines and Geology has conducted investigation for lime stone in the Gundlupet taluk and deposits are estimated to be about 10,00,000 tonnes of kankary limestone.

(*c*) The quantity should be at least 10 million tons. The material available at Begoor is lime kankar and not lime stone.

(*d*) Yes.

Bhadravathi : about 40 million tonnes within a radius of 10 to 12 miles.

Ammasandra : about 10 million tonnes within a radius of 6 to 8 miles.

Bagalkot : over 200 million tonnes within a radius of 1 to 4 miles.

Shahabad : over 50 million tonnes within a radius of 1 to 5 miles.

Grant of Forest Land

519. Sri THIRUMALA DEVARAYA (Gangavathi).—

Will the Minister of State for Forests be pleased to state :—

(*a*) the number of applications received for the grant of forest land for cultivation in Gangavathi Taluk;

(*b*) the extent of land in respect of which applications were received and the extent of land granted ?

Sri ALUR HANUMANTHAPPA (Minister of State for Forests).—

(*a*) 46.

(*b*) The area applied for is 391 acres and 31 guntas. 20 acres have been granted lease.

Lease of Land to the Congress Exhibition, Subhas Nagar, Bangalore

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಿನ್ನೆ ಈ ಸಭೆಯಲ್ಲಿ ಕಾಂಗ್ರೆಸ್ ವನ್ನು ಪ್ರದರ್ಶನಕ್ಕೆ ಸುಭಾಸ್ ನಗರದಲ್ಲಿ ಜಾಗವನ್ನು 99 ವರ್ಷಗಳ ಲೀಸ್‌ಗೆ ಕೊಡುವ ಪ್ರಶ್ನೆ ಬಂದಾಗ ಅದನ್ನು ಕೈಬಿಟ್ಟಿದ್ದೇವೆಂದು ಹೇಳಲಿಲ್ಲ, ಮುಖ್ಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರ ಈ ವಿಚಾರದಲ್ಲಿ ಬರಲಿಲ್ಲ. ಆಗ ಮುಖ್ಯ ಮಂತ್ರಿಗಳು ಇರಲಿಲ್ಲ. ಈ ಬಗ್ಗೆ ಮತ್ತೆ ಕೇಳುತ್ತಿದ್ದೇವೆ, ದಯವಿಟ್ಟು ಮಾಡಿ ಮುಖ್ಯ ಮಂತ್ರಿಗಳು ಹೇಳಬೇಕು. 99 ವರ್ಷ ಕಾಂಗ್ರೆಸ್ ಪಕ್ಷಕ್ಕೆ ಲೀಸ್‌ಗೆ ಕೊಡಬೇಕಾದರೆ ಎಲ್ಲ ಪಕ್ಷದವರನ್ನೂ ಕರೆದು ಮಾತುಕತೆ ನಡೆಸಿ ಅದರ ಪ್ರಕಾರ ನಡೆಯುತ್ತೇವೆಂದು ಅವರು ಆಶ್ವಾಸನೆ ಕೊಡಬೇಕು ಸುಮ್ಮನೆ ಒಂದು ರೀತಿ ನಾಚಿಕೆಯಾವಾಗಿ ಹೇಳಿದರು, ಹೊರಟು ಹೋದರು. ಈಗ ಮುಖ್ಯ ಮಂತ್ರಿಗಳು ಇದ್ದಾರೆ ಅವರು ಈ ಬಗ್ಗೆ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಒಂದು ಹೇಳಿಕೆಯನ್ನು ನೀಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುತ್ತಾ ಇದ್ದೇನೆ.

ಅಧ್ಯಕ್ಷರು.—ನಿನ್ನೆ ಇದರ ಸಂಬಂಧವಾಗಿ ಅನೇಕ ಮಾತುಗಳಾಗಿವೆ. ರೂಲ್ ಪ್ರಕಾರ ಏನೇ ಮಾಡಿದರೂ ಆಗುತ್ತದೆ. ಆದರೆ ಬೇಕಾದ ಕಾಲಕ್ಕೆ ಎದ್ದು ಈ ರೀತಿ ಪ್ರಶ್ನೆ ಎತ್ತಲಿಕ್ಕೆ ಬರುವುದಿಲ್ಲ. ಪಾರ್ಲಿಮೆಂಟರಿ ಮಿನಿಸ್ಟರು ಸರ್ಕಾರದವತಿಯಿಂದ ಎಂ.ಪಿ.ಸಿ.ಸಿ. ಗೆ ಆ ಜಾಗ ಕೊಡಬೇಕೇ ಕೊಡಬಾರದೇ ಎಂಬ ಪ್ರಶ್ನೆ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ ಅದಕ್ಕಿಂತಲೂ ಹೆಚ್ಚಿಗೆ ರೂಲ್ ಬಿಟ್ಟು ಈಗ ಏನು ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಸಂಬಂಧ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ ರೂಲ್ಸ್ ಬಿಟ್ಟು ಹೋಗಿಲ್ಲ, ನನ್ನ ಪ್ರಶ್ನೆ ಇಷ್ಟೆ.....

ಅಧ್ಯಕ್ಷರು.—ಈಗ ಆ ಪ್ರಶ್ನೆ ಮುಗಿಯಿತು ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಸಭೆಯಲ್ಲಿ ನಿನ್ನೆ ಚರ್ಚೆ ಮುಗಿಯುವಾಗ ಕೊನೆಯಲ್ಲಿ ಮುಖ್ಯ ಮಂತ್ರಿಗಳಿಂದ ಸ್ಪಷ್ಟವಾದ ಅಭಿಪ್ರಾಯ ಬರಲಿಲ್ಲ.

ಅಧ್ಯಕ್ಷರು. —ಮುಖ್ಯ ಮಂತ್ರಿಗಳು ಹೇಳಬೇಕಾಗಿಲ್ಲ, ಮುಖ್ಯ ಮಂತ್ರಿಗಳು ಹೇಳಿದರೆ ಏನು ಪಾರ್ಲಿಮೆಂಟರಿ ಮಿನಿಸ್ಟರು ಹೇಳಿದರೆ ಏನು, ಎಲ್ಲಾ ಒಂದೇ, ಸರ್ಕಾರದವತಿಯಿಂದ ಸ್ಟೇಟ್‌ಮೆಂಟ್ ಮಾಡಿದ್ದಾರೆ, ಆ ಪ್ರಶ್ನೆ ಈಗ ಎತ್ತಲಿಕ್ಕೆ ಬರುವುದಿಲ್ಲ. ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

Sri B. P. GANGADHAR (Tumkur).—Under Rule 59 of the Rules of Procedure and Conduct of Business in the Mysore Legislative Assembly I have submitted a notice saying that I desire to raise discussion on a matter of urgent public importance, namely, the action of the Government in disposing of this valuable piece of land, nearly 12 acres in extent. Yesterday you were feeling that there was no formal notice or motion so that the Chair will be not in a position to allow discussion on this matter. Yesterday submissions were made to the effect that decision had already been taken but details regarding the number of years it has to be given and also about giving and taking of money, etc., have to be worked out. It is the Congress Government that is giving the land in one hand and it is the Congress organisation that is taking it in another hand. So, Sir, I feel that justice may not be meted out in this particular deal. It is a big deal which is 100 times bigger than the Rama Priya Deal. It is a matter concerning the entire State. The Members on this side may not have any grouse if they were to conduct their exhibitions as they were doing previously. But if it is a permanent lease for 99 years, it is as good as that property being given to Congress organisation for generations together. So, it is a very important matter and I request your goodself in the interest of the State and the 2½ crores of people to accord permission for discussion of this very important matter. If the Chief Minister were to give an assurance that this land will not be disposed of, I will not press this notice. I want a categorical answer from the Chief Minister that this property will not be disposed of. If they can give an assurance, there is no need for pressing this notice. If they cannot give an assurance, I request the Chair to accord permission for this matter being discussed on this notice.

Sri H. N. NANJE GOWDA (Arkalgud).—I have also given a separate notice on the same subject under rule 172. If there is a categorical reply, I will be satisfied.

ಅಧ್ಯಕ್ಷರು.—ಪ್ರಿವಿಲೇಜ್ ಮೋಷನ್ ಬೇರೆ ವಿಷಯ ಆಗುತ್ತದೆ. ಇವರು ಹೇಳಿದ್ದು ಬೇರೆ ಆಗುತ್ತದೆ ಅದಕ್ಕೆ ಬೇರೆ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ —ನನಗೆ ಅವಕಾಶ ಕೊಡಲಿಲ್ಲ. ನಡುವೆ ಗೊಂದಲವಾಯಿತು ಈಪೊತ್ತು ಇದರ ಹಿನ್ನೆಲೆ ಏನು ಎಂದು ಹೇಳುವುದಕ್ಕೆ ಅವಕಾಶ ಕೊಡಬೇಕು.

Sri C. K. RAJAIAH SHETTY.—I have raised half an hour discussion.

Sri M. NAGAPPA.—I have given notice of a separate motion on the same subject under rule 50 and I want to bring this to the notice of the Chair and request that this also may be taken into consideration.

Sri K. PUTTASWAMY (Minister for Law, Labour and Parliamentary Affairs).—I just want to bring to your kind notice proviso to rule 60 which reads as follows :—

> " Provided that if an early opportunity is otherwise available for the discussion of the matter the Speaker may refuse to admit the notice."

ಶ್ರೀ ಎಸ್. ಗೋಪಾಲಗೌಡ.—ಈ ಮಾನ್ಯ ಸಚಿವರು, ಶ್ರೀ ಗಂಗಾಧರ್, ಶ್ರೀ ರಾಜಯ್ಯ ಶೆಟ್ಟರು ತಂದ ಪೋಷಣೆಗೆ ಅವಕಾಶವಿಲ್ಲ, ತಾವು ತಳ್ಳಿ ಹಾಕಬಹುದು ಎಂದು ನೂಚನೆ ಕೊಟ್ಟಿದ್ದಾರೆ. ನಾವೆಲ್ಲಾ ಸೇರಿ ಒಂದು ಪ್ರಿವೆರೇಜ್ ಪೋಷನ್ ಕೊಟ್ಟಿದ್ದೆವು.

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ವಿರೋಧ ಪಕ್ಷದ ನಾಯಕರೂ, ಉಪನಾಯಕರೂ ಇಲ್ಲದಿರತಕ್ಕ ಸಮಯದಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಏನು ಮಾನ್ಯ ಪುಟ್ಟಸ್ವಾಮಿಯವರು, ಈ ಕಾಂಗ್ರೆಸ್ಸಿಗೆ ಆ ಸ್ಥಳವನ್ನು 99 ವರ್ಷಕ್ಕೋ, ಎಷ್ಟು ವರ್ಷಕ್ಕೋ, ಕೊಡುವ ವಿಷಯವನ್ನು ಪುನರ್ವಿಮರ್ಶೆ ಮಾಡುತ್ತೇವೆ, ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಿ ಬಿಟ್ಟರೆ, ನಮ್ಮ ಸ್ನೇಹಿತರಿಗೆ ನಾಕು ಎಂದು ಕಾಣುತ್ತದೆ. ತಾವು ನಂತರ ಅಂಜೆಡಾದ ಪ್ರಕಾರ ಮುಂದಿನ ಇತರ ವಿಷಯಗಳನ್ನು ತೆಗೆದುಕೊಳ್ಳಬಹುದು.

Sri K. PUTTASWAMY.—Regarding the suggestion made by the Hon. Member Sri Gopala Gowda, I would make a humble suggestion. The Cabinet functions on joint responsibility. I am sure that the statement is made on behalf of the Government and that should satisfy the Hon. Members. It is very strange that the Hon. Member Sri Gopala Gowda with rich experience at his credit is making that suggestion.

ಶ್ರೀ ಬಿ. ಪಿ. ಗಂಗಾಧರ್.—ತಾವು ಈಗ ಅಪ್ಪಣೆ ಕೊಡಿಸಿದ್ದೀರಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದು ಪ್ರಿವೈರ್ ಆಗುತ್ತದೆಂದು. ಈಗ ಇದನ್ನು ಕೊಡುವುದಿಲ್ಲ ಎಂದು ಮುಖ್ಯ ಮಂತ್ರಿಯವರು ಹೇಳಿಬಿಟ್ಟರೆ, ಏನು ಮುತ್ತು ಬಿದ್ದು ಹೋಗುವುದಿಲ್ಲ. ಇದು ದೇಶದ ಸೊತ್ತು. ಅದನ್ನು ಹೇಳಿಬಿಟ್ಟರೆ, ಮುಂದಿನ ಕಾರ್ಯಕ್ರಮವನ್ನು ಮುಂದುವರಿಸಬಹುದು.

Mr. SPEAKER.—The Hon. Minister for Parliamentary Affairs on behalf of the Government has given an assurance that even the question of giving the land to M.P.C.C. is open to consultation and that statemen. is being reiterated in the very presence of the Hon. Chief Ministtet Hon. Members may accept that statement when that statement is onr repudiated by the Hon. Chief Minister.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಮಾತಿಗೆ ನಾನು ಬಹಳ ಗೌರವ ಕೊಡುತ್ತೇನೆ. ಈಗ ಮಾನ್ಯ ಪುಟ್ಟಸ್ವಾಮಿಯವರು ಹೇಳಿದಂತಹ ಒಂದು ಜಂಟಿ ಜವಾಬ್ದಾರಿ ಸರ್ಕಾರಕ್ಕೆ ಇದೆ. ಅವರು ಸರ್ಕಾರದ ಪರವಾಗಿ ಹೇಳಿದಂತಹ ಭರವಸೆಯ ಮಾತನ್ನು ಸರ್ಕಾರದ ಪರವಾಗಿ ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಆದರೆ ತಾವು ಒಂದು ಕೆಲಸ ಮಾಡಿ. ಮುಖ್ಯ ಮಂತ್ರಿಯವರು ಹೇಳಿರತಕ್ಕಂತ ಹೇಳಿಕೆಯನ್ನು ನಳೆಯ ಮುಂದೆ ಓದಿಬಿಡಲಿ, ಮತ್ತು ಈ ಹೇಳಿಕೆ ಕಟ್ಟ

ಕಡೆಯದು ಎಂದು ಹೇಳಿ ಬಿಡಲಿ. ಈಗ ಎರಡೂ ಹೇಳಿಕೆಗಳಲ್ಲಿ ತಾರತಮ್ಯ ಇದೆ. ಆದ್ದರಿಂದ ತಮ್ಮಲ್ಲಿ ಏನಂತಿಮಾಡಿಕೊಳ್ಳುವುದು ಏನೆಂದರೆ, ನಾವು ಇದನ್ನು ಪ್ರಿಸಿಡೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ವಿಷಯದಲ್ಲಿ ನಮ್ಮನ್ನು ಕೇಳಬೇಕೆಂದು ಭಾವಿಸುತ್ತೇವೊ ಆ ವಿಷಯವನ್ನು ಪ್ರಸ್ತಾಪಿಸುತ್ತೇವೆ. ಉಳಿದವುಗಳಿಗೆ ರೂಲ್ಸ್ ಅಂಡ್ ಪ್ರೊಸೀಜರ್ ಪ್ರಕಾರ ಏನು ಅವಕಾಶ ಇದೆ, ಆ ರೀತಿ ಕೇಳುತ್ತೇವೆ. ಇದನ್ನು ಪ್ರಿಸಿಡೆಂಟ್ ಮಾಡಬಾರದು ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಏಕೆಂದರೆ ಸರ್ಕಾರ ಎಲ್ಲಾ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಪ್ರತಿದಿನ ನಮ್ಮನ್ನು ಕೇಳಲಾಗುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ.

Mr. SPEAKER.—When the Hon. Minister for Parliamentary Affairs has said that it is a joint responsibility and it is open for consultation, why not the members accept his words? That has been stated in the presence of the Chief Minister.

Sri K. H. PATIL (Gadag).—If the Chair decides that the verdict of the Hon. Minister for Parliamentary Affairs is the verdict of the Government, we bow our heads to the Chair. The Chair's decision is binding on us. There will be no ambiguity.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಈಗ ನನಗೆ ಒಂದು ಶಂಕೆ ವ್ಯಕ್ತಪಡುತ್ತದೆ. ಅದು ಏನೆಂದರೆ ಈ ಅಧಿವೇಶನ ಕಳೆಯುವವರೆಗೂ ಹಾಗೆಯೇ ಇದನ್ನು ಬಿಟ್ಟಿದ್ದು ಈ ಅಧಿವೇಶನ ಅದಮೇಲೆ ಯಾವುದೋ ಒಂದು ಕಾಲದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದರೆ ಮತ್ತೆ ಅಧಿವೇಶನ ಸೇರುವುದಕ್ಕೆ ಬಹಳ ವಿಪಸವಾಗುತ್ತದೆ. ಆದ್ದರಿಂದ ಈ ಅಧಿವೇಶನ ಆಖೈರಾಗುವುದರೊಳಗೆ ವಿರೋಧ ಪಕ್ಷದ ನಾಯಕರನ್ನು ಸೇರಿಸಿ ಈ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಉತ್ತಮ ಎಂದು ನಾನು ಸಲಹೆ ಮಾಡುತ್ತೇನೆ. ಅದನ್ನು ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

Mr. SPEAKER.—An assurance is given. After giving that assurance, I think, the Hon. Member need not entertain any doubt. We have heard amply from the Ruling Party. Let us trust each other. Therefore, in view of what has happened so far, the Hon. Member Sri Gangadhar and other members on this side, will allow me to dispose of their notice.

Sri H. N. NANJE GOWDA.—I don't wish you to do so.

Mr. SPEAKER.—This is about half-an-hour discussion and other matters. I think, they are to be taken as dropped.

ಶ್ರೀ ಪಾಟಾಳ್ ನಾಗರಾಜ್.—ಈಗ ತಾನೆ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದರು ಈ ಸಭೆ ಆಖೈರಾಗುವುದರೊಳಗಾಗಿ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು. ಅದು ಸರಿ ಎಂದು ಕಾಣುತ್ತದೆ. ಏತಕ್ಕೆಂದರೆ ಈ ಸಭೆ ಇಲ್ಲದೇ ಇರುವಾಗ ಮತ್ತು ವಿರೋಧ ಪಕ್ಷದವರು ಇಲ್ಲದೇ ಇರುವಾಗ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದು ತಮ್ಮ ಒಂದು ಸ್ವಂತ ಜವಾಬ್ದಾರಿಯಿಂದ ಸರ್ಕಾರ ತೆಗೆದುಕೊಳ್ಳುವ ನಿರ್ಣಯವಾಗುತ್ತದೆ. ಆದ್ದರಿಂದ ಈ ಸಭೆ ಎಷ್ಟು ದಿವಸಗಳು ನಡೆಯುತ್ತದೆಯೋ ಅದರ ಮಧ್ಯದಲ್ಲಿ ಯಾವುದಾದರೂ ಒಂದು ದಿವಸ ಈ ಬಗ್ಗೆ ವಿರೋಧಪಕ್ಷದವರೊಡನೆ ಸಮಾಲೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಸಭೆಗೆ ಆಶ್ವಾಸನೆಯನ್ನು ಕೊಡಲಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಕಾದರೆ ಈ ಬಗ್ಗೆ ವಿರೋಧಪಕ್ಷದ ನಾಯಕರೊಡನೆ ಸರ್ಕಾರದವರು ಸಮಾಲೋಚನೆ ಮಾಡಬೇಕು ಎಂದು ಹೇಳಿದರೆ ಸಾಕು. ಆದರೆ ಇದರ ಸಂಬಂಧ ಟೀಕೆ ಮಾಡಬಾರದು. It all depends upon the time and convenience. Whenever the decision is to be taken on this matter, it will be taken after hearing the Leader of the Opposition.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ ನಾವು ಇದಕ್ಕೆ ಒಪ್ಪುವುದಾದರೆ ಇವರು ವಿಧಾನ ಸೌಧವನ್ನು ಯಾರಿಗಾದರೂ ಮಾರುತ್ತಾರೆ. ಇವರು ತಮ್ಮ ಪಾರ್ಟಿಯ ಬೆಳವಣಿಗೆಗೆ ಆಸ್ತಿಯನ್ನು ಮಾಡುತ್ತಿದ್ದಾರೆ. ನಾಳೆ ಇವರು ಕಬ್ಬನ್ ಪಾರ್ಕಿನ ಒಂದು ಭಾಗವನ್ನು ಬೇಕಾದರೂ ಮಾರುತ್ತಾರೆ. My apprehension is this. They may try to put in their hand this way in other matters also.

2-30 P.M.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ತಾವು ಮಾನ್ಯ ಸದಸ್ಯರುಗಳಿಗೆ ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಮ್ಮ ಅಭ್ಯಂತರವಿಲ್ಲದಿದ್ದರೂ ನಮಗೆ ಒಂದು ಕಷ್ಟವಿರುತ್ತದೆ. ನಾವುಗಳು ಎದ್ದು ಎದ್ದು ಮಾತನಾಡುವುದಕ್ಕೆ ಹೋದರೆ ತಮಗೆ ಸಭೆಯ ಕಾಲ ವ್ಯಯವಾಗುತ್ತದೆ ಎಂಬ ಭಯ ಇದೆ. ಮಾನ್ಯ ಸದಸ್ಯರುಗಳು ಮಾತನಾಡಿದ್ದಕ್ಕೆ ಸರ್ಕಾರದವರು ಏನಾದರು ಉತ್ತರ ಕೊಡದಿದ್ದರೆ ಅದು ಪತ್ರಿಕೆಗಳಲ್ಲಿ ಬರುತ್ತದೆ. ಆದ್ದರಿಂದ ಸಾರ್ವಜನಿಕರ ಮೇಲೆ ಏನಾದರೂ ಪರಿಣಾಮ ಉಂಟಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ಮಾನ್ಯ ಸದಸ್ಯರಾದ ಶ್ರೀ ಗಂಗಾಧರ ಅವರು ಈಗ ಕಬ್ಬನ್‌ಪಾರ್ಕ್‌ನ್ನು ಸಹ ಸರ್ಕಾರದವರು ತಮ್ಮ ಪಕ್ಷಕ್ಕೆ ಮಾರಿಕೊಂಡರೆ ಏನು ಮಾಡುವುದು ಎಂದು ಕೇಳಿದರು. ನಾವು ಆ ಬಗ್ಗೆ ಉತ್ತರ ಕೊಡದಿದ್ದರೆ ಆ ವಿಚಾರ ಪತ್ರಿಕೆಗಳಲ್ಲಿ ಬರುತ್ತದೆ. ಪತ್ರಿಕೆಗಳನ್ನು ನೋಡಿದ ಜನರು ಏನು ಭಾವನೆ ಮಾಡಿಕೊಳ್ಳುತ್ತಾರೆಂದರೆ : ಈ ಸರ್ಕಾರದವರು ಸಾರ್ವಜನಿಕರ ಆಸ್ತಿಯನ್ನು ತಮ್ಮ ಪಕ್ಷಕ್ಕೆ ಮಾರಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅದಕ್ಕಾಗಿ ವಿರೋಧಪಕ್ಷದವರು ವೀರಾವೇಶದಿಂದ ಹೋರಾಡುತ್ತಿದ್ದಾರೆ ಎಂಬ ಭಾವನೆ ಜನರಲ್ಲಿ ಬರುತ್ತದೆ.

(ಗದ್ದಲ)

ಅಧ್ಯಕ್ಷರು.—ಒಂದು ಮಾತನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು, ಏನೆಂದರೆ ಯಾರಾದರೂ ಮಾತನಾಡುವ ಕಾಲಕ್ಕೆ ಬೇರೆಯವರು ನಮ್ಮನೆ ಕುಳಿತು ಕೇಳಬೇಕು ಅವರು ಮಾತನಾಡಿದ ಮೇಲೆ ಅವರು ಹೇಳಿದ್ದು ತಮಗೆ ಸರಿ ಕಾಣದಿದ್ದರೆ ಅನಂತರ ಮಾತನಾಡುವುದು ಸರಿ. ಇದು ಡೆಮಾಕ್ರಸಿಯ ಮೊದಲನೆಯ ತತ್ವ ಒಬ್ಬರು ಹೇಳುವುದನ್ನು ಶಾಂತ ರೀತಿಯಿಂದ ಕೇಳುವುದು ಒಂದು ಲಕ್ಷಣ. ಎಲ್ಲರೂ ಒಂದೇ ಸಾರಿ ಮಾತನಾಡಿದರೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಈಗ ಎಲ್ಲರಿಗೂ ಸಮಾಧಾನವಾಗುವಂತಹ ಪರಿಸ್ಥಿತಿ ಬಂದಿರುವುದರಿಂದ ಅದೇ ವಿಚಾರದಲ್ಲಿ ಮತ್ತೆ ಮತ್ತೆ ಮಾತನಾಡುವುದು ಸರಿಯಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರು ಏನು ಅನ್ಯಾಯ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅದರ ಬಗ್ಗೆ ವಿಚಾರ ಮಾಡುವವರು ಬೇರೆಯವರು ಇದ್ದಾರೆ. ನಾವು ಮತ್ತು, ನೀವು ನಮ್ಮನೆ ಏತಕ್ಕೆ ಮಾತನಾಡಬೇಕು ?

ಶ್ರೀ ಪಾಟಾಳ್ ನಾಗರಾಜ್.—ನಮಗೆ ಇದರ ಬಗ್ಗೆ ಭಯ ಇದೆ. ನಾಳೆ ಅವರು ವಿಧಾನ ಸೌಧವನ್ನೂ ಮಾರುವುದಕ್ಕೆ ತಯಾರಿರಬಹುದು. ಅಲ್ಲದೆ ಸುಭಾಷ್‌ನಗರದ ಬಳಿ ಇದ್ದ ಕೆರೆಯನ್ನು 99 ವರ್ಷ ಲೀಸ್‌ಗಾಗಿ ಕೊಟ್ಟಿರಲಿಲ್ಲವೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಹೀಗೆ ಎದ್ದು ಮಾತಾಡಬಾರದು.

ಶ್ರೀ ಪಾಟಾಳ್ ನಾಗರಾಜ್.—ಅವರು ಇಲ್ಲಿ ತಪ್ಪು ಅಭಿಪ್ರಾಯ ಕೊಡುತ್ತಿದ್ದಾರೆ, ಸರಕಾರವನ್ನು ಲೂಟಿ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಲೂಟಿ ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಒಂದು ರೀತಿಯಾದ ಗಿವ್ ಅಂಡ್ ಟೇಕ್ ಪಾಲಸಿ ಇರಬೇಕು. ಲೂಟಿ ಇತ್ಯಾದಿ ಶಬ್ದಗಳನ್ನು ಉಪಯೋಗಿಸಿ ಮಾತಾಡುವುದರಿಂದ ಏನು ಲಾಭವಾಗುವುದಿಲ್ಲ. I request all hon. Members to use a decent language and not offend others' mental feelings. I want the hon. Members to use parliamentary language without ascribing any motive to others.

ಶ್ರೀ ಹೆಚ್. ಎನ್. ನಂಜೇಗೌಡ.—ಸ್ವಾಮಿ, ಮಾನ್ಯ ಮಂತ್ರಿಗಳಿಗೆ ಇಲ್ಲಿ ಒಂದು ವಿಚಾರ ತಿಳಿಸಬೇಕಾಗಿದೆ. ಬೆಂಗಳೂರು ನಗರದಲ್ಲಿ ಇದ್ದ ರೆವಿನ್ಯೂ ಪಾರ್ಕೆಟ್ಸ್‌ಗಳೊಳಗೆ ಸುಮಾರು 52 ಎಕರೆಗಳಷ್ಟು ಪ್ರದೇಶವನ್ನು ಇವರಿಗೆ ಬೇಕಾದ ಸ್ಪೆಜನರಿಗೆ ಅಪ್‌ಸೆಟ್ ಪ್ರೈಸ್‌ನಲ್ಲಿ ಕೊಟ್ಟಿದ್ದಾರೆ. ಇಂದು ಇದನ್ನು ಪಡೆದವರು ಲಾಭ ಮಾಡುವುದಕ್ಕಾಗಿ ಒಂದಕ್ಕೆ ಹತ್ತರಷ್ಟು ಇಲ್ಲವೇ ಇಪ್ಪತ್ತರಷ್ಟು ಹಾಗೂ ಕೆಲವು ಕಡೆ ನೂರರಷ್ಟು ಬೆಲೆಗೆ ಮಾರಾಟ ಮಾಡಿಕೊಂಡಿದ್ದಾರೆ. ಇದು ಸ್ವಜನ ಪಕ್ಷಪಾತವಲ್ಲವೇ ? ಇದನ್ನು ನಾನು ಅವರಿಗೆ ರುಜುವಾತು ಪಡಿಸುತ್ತೇನೆ. ಇದನ್ನು ಒಪ್ಪುತ್ತಾರೆಯೇ ?

ಶ್ರೀ ಕೆ, ಪುಟ್ಟಸ್ವಾಮಿ.—ಸ್ವಾಮೀ, ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್‌ರವರು ಕಬ್ಬನ್ ಪಾರ್ಕ್‌ನ್ನೇ ಹಂಚಿ ಬಿಡುತ್ತಾರೆ ಎಂದು ಹೇಳಿದರು. ಹೇಳಲಿ ಅದರ ಬಗ್ಗೆ ಕೂಡ ನಾವು ಉತ್ತರ ಕೊಡಬೇಕಾಗುತ್ತದೆ. ಅಲ್ಲದೆ ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡರು ಬೆಂಗಳೂರು ನಗರದಲ್ಲಿ 52 ಎಕರೆಗಳಷ್ಟು ರೆವೆನ್ಯೂ ಲ್ಯಾಂಡುಗಳನ್ನು ರೆವೆನ್ಯೂ ಸೈಟುಗಳಾಗಿ ಅವರ ಪಕ್ಷದವರಿಗೇ ಹಂಚಿದ್ದಾರೆ ಎಂದೂ ಹೇಳಿದರು. ಅಥವಾ ಸಾರ್ವಜನಿಕ ಆಸ್ತಿಗಳನ್ನು ಹಾಳು ಮಾಡಿದ್ದಾರೆ ಎಂದೂ ಹೇಳಿದರು. ಹೇಳಲಿ. ಇದಕ್ಕೂ ನಾವು ಸರಕಾರದ ಪರವಾಗಿ ಉತ್ತರ ಕೊಡಬೇಕಾಗುತ್ತದೆ. ಇದು ನಮ್ಮ ಕರ್ತವ್ಯ. ಹಾಗೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರೂ ಕೂಡ ಆಗಾಗ್ಗೆ ಲೂಟಿ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇದಕ್ಕೂ ಉತ್ತರ ಕೊಡೋಣ. ಅವರು ಲೂಟಿ ಎಂದರೆ ಏನು ಅರ್ಥವೋ ನನಗೆ ಗೊತ್ತಿಲ್ಲ.

ಶ್ರೀ ಬಿ. ಪಿ. ಗಂಗಾಧರ್.— ಲೂಟಿ ಎಂದರೆ ರಾಬರಿ ಎಂದಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್‌ರವರು ಲೂಟಿ ಎಂದರೆ ರಾಬರಿ ಎಂದು ಅರ್ಥವಾಗುತ್ತದೆ ಎಂದು ಹೇಳುತ್ತಾರೆ. ಅವರೆಲ್ಲಿ ಹೆಚ್ಚು ಓದಿದವರು. ನನಗೆ ಅಷ್ಟು ತಿಳುವಳಿಕೆ ಇಲ್ಲ. ನಾನೂ ಕೂಡ ಅಲ್ಪ ಸ್ವಲ್ಪ ತಿಳಿದುಕೊಂಡು ವಕಾಲತ್ ಮಾಡಿದ್ದೇನೆ. ಅದು ಹೇಗೆ ಇಲ್ಲಿ ಅರ್ಥವಾಗುತ್ತೋ ನನಗೆ ಗೊತ್ತಾಗುತ್ತಿಲ್ಲ. ಅದು ಹೇಗೇ ಇರಲಿ ಅವರು ಹೇಳಿದುದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಮಧ್ಯೆ ಮಧ್ಯೆ ಹೀಗೆ ಇಂಟರಪ್ಟ್ ಮಾಡಿ ಹೇಳಿದರೆ ಅದಕ್ಕೆ ನಾವು ಉತ್ತರ ಹೇಳಲೇ ಬೇಕಾಗುತ್ತದೆ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ನಮ್ಮ್‌ಲೆ ಇಲ್ಲದ್ದನ್ನು ಹೇಳಿದರೆ ಅದು ಪತ್ರಿಕೆಗಳಲ್ಲಿ ಬರಲು ಅವಕಾಶವಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ.

ಮಾನ್ಯ ಸದಸ್ಯರು ಉತ್ತರ ಹೇಳುವುದಕ್ಕೆ ಅವಕಾಶವಾಗುವಂಥ ಒಂದು ನಿರ್ಣಯವನ್ನಾಗಲೀ ಸೂಚನೆಯನ್ನಾಗಲ ತೆಗೆದುಕೊಂಡು ಅಧ್ಯಕ್ಷರ ಅಪ್ಪಣೆ ಪಡೆದು, ಒಂದು ಗಂಟೆ, 2 ಗಂಟೆ ಚರ್ಚಿಸಿದರೆ ಒಳ್ಳೆಯದು. ಅದು ಬಿಟ್ಟುಬಿಟ್ಟು ಮತ್ತೆಮತ್ತೆ ನಮ್ಮ ಮೇಲೆ ಆರೋಪಣೆ ಮಾಡಿ ಉತ್ತರ ಹೇಳುವುದಕ್ಕೆ ಅವಕಾಶ ಕೊಡದೇ ಹೋದರೆ ಆನಾವಶ್ಯಕವಾದ ಆರೋಪಗಳು ನಮ್ಮ ಮೇಲೆ ಬರುತ್ತದೆ. ಇದಕ್ಕೋಸ್ಕರ ಒಂದು ರಕ್ಷಣೆ ಕೊಡುವುದಕ್ಕೋಸ್ಕರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ನಾಗರಾಜ್ ರವರು ಸರ್ಕಾರ ಏನೇನೋ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ಅದನ್ನು ಎತ್ತುವದಕ್ಕೆ ಬೇಕಾದಷ್ಟು ಅವಕಾಶ ಇದೆ. ಇನ್ನೂ 3-4 ದಿವಸ ಬಜೆಟ್ ಚರ್ಚೆ ನಡೆಯುತ್ತದೆ. ಆಗ ಆ ವಿಷಯ ಎತ್ತಿದರೆ ನಾವೂ ಕೂಡ ಉತ್ತರ ಕೊಡುತ್ತೇವೆ. ಅವರು ನಮ್ಮನ್ನು ಬಣ್ಣ ಕಟ್ಟುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅವರು ಆ ರೀತಿ ಹೇಳಬಾರದು. ಮಾನ್ಯ ಸದಸ್ಯರು ನಮ್ಮಮೇಲೆ ಆರೋಪಣೆ ಮಾಡಿದರೂ ಅದಕ್ಕೆ ಪ್ರತಿಯಾಗಿ ನಾವು ಹೇಳುವುದಕ್ಕೆ ಅವಕಾಶ ನಮಗೆ ಇರಬೇಕು. ಇಲ್ಲದೇ ಇದ್ದರೆ ನಮ್ಮ ಸರ್ಕಾರವು ನಿಲುವು ಜನಗಳಿಗೆ ಗೊತ್ತಾಗುವುದಿಲ್ಲ. ಈ ವಿಚಾರ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಹೇಳಿದ್ದು ಸರಿಯಾಯಿತು. ಶ್ರೀ ಕೆ. ಹೆಚ್. ಪಾಟೀಲರ ನಿರ್ಣಯವನ್ನು ಈ ಸಭೆಯ ನಿರ್ಣಯ ಎಂದು ತಿಳಿದುಕೊಂಡರೆ ಅದಕ್ಕೆ ನಾವೂ ಕೂಡ ತಲೆಬಾಗುತ್ತೇವೆ. ಶ್ರೀಮಾನ್ ಪುಟ್ಟಸ್ವಾಮಿಯವರು ಸ್ವಲ್ಪ ಹೆಚ್ಚು ಸರಿ ಎದ್ದು ಮಾತನಾಡುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಈ ಸಭೆಯಲ್ಲಿ ಒಂದು ದಿವಸಕ್ಕೆ ಒಂದು ಗಂಟೆ ಕಾಲ ಪ್ರಶ್ನೋತ್ತರವನ್ನು ವೀಸರ್ವಾಗಿಟ್ಟಿದೆ. ಅಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯುತ್ತದೆ. ಬಾಕಿ ವಿಷಯಗಳಿಗೆ ಭಾಷಣಗಳಾಗಬೇಕು. ತಕ್ಕ ಉತ್ತರಗಳಾಗಬೇಕು. ಮಧ್ಯೆ ಸ್ವಲ್ಪ ಮಟ್ಟಿಗೆ ಇಂಟರಪ್‌ಷನ್ ಮತ್ತು ಇಂಟರ್‌ವೆನ್‌ಷನ್ ಮಾಡಲು ಪಾರ್ಲಮೆಂಟರಿ ಡೆಮಾಕ್ರಸಿಯಲ್ಲಿ ಅವಕಾಶವಿದೆ. ಹಾಗೆ ಮಾಡುವಾಗ ಮಾತನಾಡುವವರು ಯೀಲ್ಡ್ ಆಗಬೇಕು ಎಂದು ಇದೆ. ಕೆಲವು ಸಲ ಕೆಲವರು ಯೀಲ್ಡ್ ಆಗುವುದಿಲ್ಲ. ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುವ ರೀತಿ

(ಶ್ರೀ ಎಸ್. ಗೋಪಾಲಗೌಡ)

ಯಲ್ಲಿ ನಮ್ಮ ಕಡೆಯವರು ಯಾವಾಗ ಮಾತನಾಡಿದರೂ ಅದಕ್ಕೆ ಉತ್ತರ ಕೊಡುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಡಬೇಕು. ಪತ್ರಿಕೆಗಳಲ್ಲಿ ಬರುವುದನ್ನು ನೋಡಿ ಸಾರ್ವಜನಿಕರ ಮನಸ್ಸಿನಲ್ಲಿ ತಪ್ಪು ಕಲ್ಪನೆ ಮೂಡುತ್ತದೆ. ಅದನ್ನು ಪರಿಹಾರ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದರೆ ಈಗ ಮೂಡಿರುವ ತಪ್ಪುಕಲ್ಪನೆಯನ್ನು ನಿವಾರಣೆ ಮಾಡುವುದಕ್ಕೆ ನಿಮಗೆ ಎಷ್ಟು ಅವಕಾಶ ಕೊಟ್ಟರೂ ಸಾಲದು. ಆದುದರಿಂದ ಈ ಸಭೆ ಬರೀ ಪ್ರಶ್ನೋತ್ತರ ಸಭೆಯಾಗಿ ಮುಕ್ತಾಯವಾಗ ಬಾರದು. ಅದಕ್ಕೆ ನನ್ನ ನಮ್ರವಾದ ಸೂಚನೆ ಒಂದನ್ನು ಸಭೆಯ ನಾಯಕರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರು ಯಾವಾಗ ಇಲ್ಲಿ ಹಾಜರಿರುತ್ತಾರೆಯೋ ಆ ಸಮಯದಲ್ಲಿ ಬೇರೆ ಬೇರೆ ಅವರ ಸಹೋದ್ಯೋಗಿಗಳು ಅವರಿಗೆ ಸಂಬಂಧಪಡದೆ ಇರುವ ವಿಷಯದ ಬಗ್ಗೆ ಮಾತನಾಡುವುದಕ್ಕೆ ಎದ್ದಾಗಲೆಲ್ಲ ಅವರ ಬದಲು ಮುಖ್ಯಮಂತ್ರಿಯವರೇ ಮಾತನಾಡುವುದು ಬಹಳ ಗೌರವಯುತವಾದ ವಿಷಯ. ಇಲ್ಲದೆ ಇದ್ದರೆ ಇಷ್ಟೆಲ್ಲ ನಾವು ಮಾತನಾಡಿದರೂ ಅವರು ಮಾತ್ರ ಸುಮ್ಮನೆ ಕುಳಿತು ಬಿಟ್ಟರೆ ಇದನ್ನು ಮೌನಸಮ್ಮತಿಯ ಲಕ್ಷಣವೆಂದು ಹೇಳೋಣವೋ ಅಥವಾ ಇದು ತಪ್ಪಿಸಿಕೊಳ್ಳುವ ಲಕ್ಷಣ ಎಂದು ತಿಳಿಯೋಣವೋ? ಇದು ಬಹಳ ತಪ್ಪಾಗುತ್ತದೆ. ಸಾರ್ವಜನಿಕವಾದ ವಿಷಯಗಳ ಬಗ್ಗೆ, ಗೊಂದಲಕ್ಕೆ ಎಡೆ ಕೊಡತಕ್ಕ ಚರ್ಚೆಗಳು ಉದ್ಭವಿಸಿದಾಗ ಘನತೆ ಗೌರವಗಳನ್ನು, ಸರ್ಕಾರದ ಹೊಣೆಗಾರಿಕೆಯನ್ನು ಎತ್ತಿ ಹಿಡಿಯುವ ನಯುವಾಗಿ ಅವರು ಒಮ್ಮೆ ಎರಡು ಮೂರು ಮಾತಿನಲ್ಲಿ ವಿಷಯವನ್ನು ತಿಳಿಸಬಹುದು. ಅವರು ಮೌನವಾಗಿ ಕುಳಿತರೆ ಈ ಸದನದಲ್ಲಿ ಚರ್ಚೆ ನಡೆಯುತ್ತದೆ, ಅವರು ಎದ್ದುಹೋಗಬೇಕಾಗುತ್ತದೆ. ದಿವಸವೆಲ್ಲ ಹೀಗೆಯೇ ನಡೆಸುವುದಾದರೆ ನಡೆಸಿ ಸಂತೋಷಪಟ್ಟುಕೊಳ್ಳಿ. ನಮ್ಮವರು ಒಂದು ಸವಾಲು ಹಾಕುತ್ತಾರೆ, ಅದಕ್ಕೆ ಅವರೂ ಒಂದು ಜವಾಬು ಕೊಡಲಿ. ಆವರೆ ಹೀಗೆ ಆಗುವುದು ಬೇಡ ಎಂದು ಹೇಳುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಶ್ರೀಮಾನ್ ಗೋಪಾಲಗೌಡರು ಇಷ್ಟೆಲ್ಲ ನಡೆಯುತ್ತಿರುವಾಗ ಸಭೆಯ ನಾಯಕರು ಏನೂ ಹೇಳುತ್ತಿಲ್ಲ ಎಂದು ಹೇಳಿದರು. ನಾನು ನಿಜವಾಗಿ, ಪ್ರಾಮಾಣಿಕತೆಯಿಂದ ಹೇಳಬೇಕಾಗಿದ್ದರೆ ನಿನ್ನೆ ಏನೇನು ನಡೆಯಿತು. ಆದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ನಿಮಗೆ ಹೇಳಬೇಕಾದರೆ ನಾನು ಈ ಸಭೆಯಲ್ಲಿ 1956ರಿಂದ ಇದ್ದೇನೆ. ಈ ಸಭೆಯಲ್ಲಿರುವಂಥ ಮಾನ್ಯ ಸದಸ್ಯರೆಲ್ಲರೂ ಜನತೆಯನ್ನು ಪ್ರತಿನಿಧಿಸುತ್ತಿದ್ದೇವೆ. "It is not your grandfathers' property," "ಲೂಟಿ ಮಾಡುತ್ತಿದ್ದಾರೆ," ಹೀಗೆ ಪದಗಳನ್ನು ಉಪಯೋಗ ಮಾಡುತ್ತಿದ್ದಾರೆ. ದಿಕ್ಷನರಿಯಲ್ಲಿ ಬೇಕಾದಷ್ಟು ಪದಗಳು ಸಿಕ್ಕುತ್ತವೆ, ಮಾತನಾಡುವುದಕ್ಕೆ ಪದಗಳು ಸಿಕ್ಕುವುದಿಲ್ಲವೆಂದಲ್ಲ. ಆದರೆ ಮಾತನಾಡುವಾಗ ಒಂದು ಶೈಲಿ ಇರುತ್ತದೆ, ಮಾತನಾಡುವ ಒಂದು ರೀತಿ ಇರುತ್ತದೆ. ಮಾನ್ಯ ಗೋಪಾಲಗೌಡರು ಒಂದೊಂದು ಸಲ ಮಾತನಾಡುವಾಗ ಎಷ್ಟೊಂದು 'ಪಿನ್ ಪಾಯಿಂಟೆಡ್' ಆಗಿ ಅಟ್ಯಾಕ್ ಮಾಡುತ್ತಾರೆ. ಆದರೆ ಅವರು ಉಪಯೋಗ ಮಾಡುವ ಶಬ್ದಗಳಲ್ಲಿ ಒಂದು ಆಕಡೆ ಈ ಕಡೆ ಇರುವುದಿಲ್ಲ. ಆ ರೀತಿಯಾಗಿ ಪಾರ್ಲಮೆಂಟರಿ ಭಾಷೆಯನ್ನು ಬಳಸಲಿಕ್ಕೆ ಬರುತ್ತದೆ. ಒಂದೇ ನಮನೆ ಲೂಟಿ ಮಾಡುತ್ತಿದ್ದಾರೆ ಎಂದು ಸದಸ್ಯರು ಎದ್ದ ತಕ್ಷಣ ಅಧ್ಯಕ್ಷರನ್ನೂ ಕೇಳದೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ರೀತಿ ಆದರೆ ಬಹಳ ವ್ಯಥೆಯಾಗುತ್ತದೆ. ಒಂದು ದಿವಸವನ್ನು ಸಭೆ ಕಳೆದು ಕೊಂದರೆ, ಒಂದು ದಿವಸ ನಮ್ಮ ಸಭೆಯ ಕಾರ್ಯಕಲಾಪಗಳು ನಡೆಯಲಾರದೆ ಹೋದರೆ, ಈ ರೀತಿ ವಾಗ್ಯುದ್ಧಗಳು ಆದರೆ, ಅದರಿಂದ ಯಾರಿಗೆ ಲಾಭ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟರಮಟ್ಟಿಗೆ ಭಾರ ಬೀಳುತ್ತದೆ ಎನ್ನುವುದು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಗೊತ್ತು. ಇಷ್ಟೆಲ್ಲಾ ಹೇಳಿದಮೇಲೆ ಇನ್ನೊಂದು ವಿಚಾರ ಹೇಳಬೇಕಾಗಿದೆ. ನಿನ್ನೆಯ ದಿವಸ ಶ್ರೀ ಕೆ. ಪುಟ್ಟಸ್ವಾಮಿಯವರು ವಿಚಾರ ಹೇಳಿದ್ದಾರೆ, ಅವರು ಹೇಳಿದಮೇಲೆ ಅವರು ಹೇಳಿದ್ದಕ್ಕೆ ಮುಖ್ಯಮಂತ್ರಿಗಳ ಒಪ್ಪಿಗೆ ಇದೆಯೇ ಎಂದು ಕೇಳುವುದು, ಅವರು ಅದಕ್ಕೆ—ನಿನ್ನೆಯ ಹೇಳಿಕೆಗೆ ಸೀರ್ ಹಾಕಬೇಕು ಎಂದು ಹೇಳುವುದು ಸರಿಯೇ? ಅದರ ಅವಶ್ಯಕತೆ ಇದೆಯೇ? ಪಾರ್ಲಮೆಂಟರಿ ಪ್ರಾಕ್ಟೀಸ್ ನೋಡಿದರೆ ಅದರ ಅವಶ್ಯಕತೆ ಇಲ್ಲವೆಂದು ಗೊತ್ತಾಗುವುದು. ನನ್ನ ಸಹೋದ್ಯೋಗಿಗಳು ಯಾರೇ ಹೇಳಿದರೂ ಕೂಡ ಜವಾಬ್ದಾರಿ ನನ್ನ ಮೇಲಿದೆ, ನನ್ನ ಜವಾಬ್ದಾರಿ ಅದರಲ್ಲಿ ಇಲ್ಲವೆಂದು ಭಾವಿಸಿ ನಾನೇ ಪುನಃ ಹೇಳಬೇಕೆಂದು ಕೇಳುವುದರಲ್ಲಿ ಅರ್ಥವಿಲ್ಲ. ಆವರೆ ಕೆ. ಎಚ್. ಪಾಟೀಲರು ನಾನು ಹೇಳಿದಮೇಲೆ ನಿಜ ಎಂದು ಒಪ್ಪಿಕೊಂಡರು. ಈ ಸಭೆಯಲ್ಲೇನು ನಡೆಯುತ್ತ ದೆಂಬುದನ್ನು ಜನರು ಕುತೂಹಲದಿಂದ ನೋಡುತ್ತಿರುತ್ತಾರೆ, ಆದುದರಿಂದ ನಾವು ಬಹಳ ಎಚ್ಚರಿಕೆಯಿಂದ ಸಾವಧಾನದಿಂದ ಉನ್ನತ ಮಟ್ಟದಲ್ಲಿ ಸಭೆಯು ಕಾರ್ಯಕಲಾಪಗಳನ್ನು ನಡೆಸಬೇಕಾಗಿದೆ.

ಹೇಳುವುದಕ್ಕೆ ಬೇಕಾದಷ್ಟು ವಿಧಾನಗಳಿವೆ. ನಿಯಮಗಳ ಸೂಚನೆ ಕಳಿಸಬಹುದು, ಅರ್ಧ ಘಂಟೆ ಡರ್ಟಿಗೆ ಅವಕಾಶ ಕೇಳಬಹುದು. ಹಕ್ಕುಬಾಧ್ಯತೆ ಸೂಚನೆ ಕಳಿಸಬಹುದು. ಇದನ್ನೆಲ್ಲಾ ಬಿಟ್ಟು ಈ ರೀತಿ ಕಾಲಹರಣ ಮಾಡುವುದು ಯಾರಿಗೂ ಭೂಷಣವಲ್ಲ. ನಾನು ಬಹಳ ನೊಂದುಕೊಂಡು ಇದನ್ನು ಹೇಳುತ್ತಿದ್ದೇನೆ. ಶ್ರೀ ಗೋಪಾಲಗೌಡರು ಯಾವರೀತಿ ತಾವು ಇಲ್ಲಿರುವುದಿಲ್ಲ, ಹೊರಟು ಹೋಗುತ್ತೇವೆ ಎಂದು ಹೇಳಿದರೋ ಅದೇ ರೀತಿಯಲ್ಲಿ ನನಗೂ ಇಲ್ಲಿಂದ ಹೊರಟುಹೋಗಬೇಕೆನಿಸುತ್ತದೆ; ಅಷ್ಟೇ ಮನಸ್ಸು ನೊಂದಿದೆ. 1956 ನೆಯ ಇಸವಿಯಿಂದ ಇಲ್ಲಿಯವರೆಗೂ ಕೂಡ ಇಂಥಾದ್ದು ನಡೆದಿಲ್ಲ, ಅಲ್ಲಿಂದಲೂ ಕೂಡ ಸದಸ್ಯರಾಗಿರುವವರು ಇಲ್ಲದ್ದಾರೆ, ಅವರನ್ನು ಕೇಳಿ. ಈ ರೀತಿಯ ಕಾರ್ಯಕಲಾಪ ಎಂದೂ ನಡೆದಿಲ್ಲ. ಒಳ್ಳೆಯ ಡೆಕೋರಂದಿಂದ, ಡೀಸೆನ್ಸಿಯಿಂದ ಈ ಸಭೆಯ ಕಾರ್ಯಕಲಾಪಗಳು ನಡೆಯಬೇಕಾದ್ದು ಅವಶ್ಯಕ. ಶ್ರೀ ಗೋಪಾಲ ಗೌಡರು ಹೊರಗೆ ತಾವು ಹೋಗುವುದಾಗಿ ಹೇಳುವುದಕ್ಕೆ ಸ್ವಲ್ಪ ಅಧಾರವಿದೆ. ಅವರಿಗೂ ಕೂಡ ಇಲ್ಲಿನ ಕಾರ್ಯಕಲಾಪಗಳು ಬೇಜಾರು ಉಂಟುಮಾಡಿರಬೇಕು. ಯಾವರೀತಿ ಟೀಕೆ ಮಾಡಬೇಕೆಂಬುದಕ್ಕೆ ಕೆಲವು ವಿಧಾನಗಳಿವೆ. ಅದರಂತೆ ಮಾಡದಿದ್ದರೆ ಸಭೆಯ ಗೌರವಕ್ಕೆ ಧಕ್ಕೆ ಬರುತ್ತದೆ. ಪೂರ್ವದಿಂದಲೂ ಕೂಡ ಈ ಸಭೆಯ ಸದಸ್ಯರಾಗಿದ್ದವರು ಒಂದು ಒಳ್ಳೆಯ ಟ್ರೆಡೀಷನ್ ಬಿಲ್ಡಪ್ ಮಾಡಿದ್ದಾರೆ, ಹಿಂದೆ ವಿರೋಧ ಪಕ್ಷದ ಮುಖಂಡರು ಒಳ್ಳೆಯ ಜಯಂಟ್ಸ್ ಇದ್ದಹಾಗಿದ್ದರು. ನಾವೂ ಕೂಡ ಅದೇ ರೀತಿಯಲ್ಲಿ ನಡೆದು ಒಂದು ರೀತಿಯಲ್ಲಿ ಸಭೆಯ ಘನತೆ ಗೌರವಗಳನ್ನು ಕಾಪಾಡಬೇಕೇ ಹೊರತು ಇರುವ ಗೌರವಕ್ಕೆ ಚ್ಯುತಿ ತರಬಾರದು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

MR. SPEAKER.—I have heard the hon. Member Sri Gopala Gowda the Hon. Minister for Parliamentary Affairs and the Hon. Chief Minister. I am not concerned with the complaint either of the Opposition or of the Government. I am concerned only with the regulation of work in the House. So I earnestly request Hon. Members to be guided by the Rules of Procedure and parliamentary practice and etiquette. Hon. Members should not take the liberty or license to raise questions which are not in the agenda without the Speaker's consent and waste the time of the House. The Members should follow the Rules of Procedure and Conduct of Business, parliamentary conventions and the provisions of the Constitution which regulate our business and conduct. 'A' may say something which may not be palatable to 'B'; similarly what 'B' says, may not be palatable to 'A'. In this House hon. Members must learn to respect differences of opinion and hear what others say with patience. Hon. Members should not try to offend anybody or call names; they should not try to infringe any rule. On the other hand they should prevent abuse of rules and procedure. In regulating the business of the House, I earnestly appeal for the co-operation of all the hon. Members. I think the matter relating to the grant of land for construction of a structure to hold Exhibition should be taken as over.....

(Sri B. P. Gangadhar stood up)

I do not permit the hon. member to speak in view of the fact that the matter is well-talked out and the position is made clear on behalf of the Government that no property is given and no final order is passed and that point will be the subject-matter of consultation. So this is the final stage with regard to the whole point. I do not think there is any necessity to reopen it now.

SRI B. P. GANGADHAR.—The hon. Chief Minister was stating that if need be, half-an-hour discussion or something like that may be raised. I have given a notice.....

Mr. SPEAKER.—I was referring to that only.

Sri B. P. GANGADHAR.—Let not the Government be under the impression that the matter is closed. In fact I have given notice of a motion. So I am entitled to be heard on my notice.

Mr. SPEAKER.—When I am standing, hon. Members should not interrupt the Chair.

For the reasons already assigned by me I cannot give my consent. The hon. Member has given notice to raise discussion under Rule 59. But Rule 61 says:

"There shall be no formal motion before the Assembly nor voting"

So it is not a motion. The Rules permit mere discussion, and that discussion has taken place to a nauseating extent. I think everybody is tired of it now. Therefore no more discussion will be permitted on it. I withhold my consent to this notice on this account.

As regards the matter raised by Sri Nanje Gowda, Sri Gopala Gowda and other hon. Members regarding the question of Privilege, I invite the attention of members to the provision in Rule 178. The question is based on document. According to the rule, the notice should have been accompanied by the document. In the notice, it is stated that inconsistent statements have been made by the hon. Ministers regarding this question. I shall get the document and see whether the statements amount to a question of privilege. In fact, the burden of furnishing the copies of the relevant document rates on the member giving notice of question of privilege and the Members raising the question have not complied with the rule. All the same, I do not take that stand. I shall go through the records and decide whether consent should be given to raise the question of privilege or not. There the matter should rest. Next item. Call Attention Notice.

Sri M. NAGAPPA.—I have sent a notice under Rule 312 regarding the matter in which the High Court has recently given judgement under the Mysore Agricultural Produce Regulation Act, 1966, wherein it is stated that the entire Market Committees which are existing in the State are illegal and invalid because they have not been constituted under this Act.

Mr. SPEAKER.—I shall look into the matter. It has not come to my knowledge yet.

† ಶ್ರೀ ಎಚ್. ಎನ್. ನಂಜೇಗೌಡ.— ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸಭೆಯಲ್ಲಿ ಅದಂತಹ ಗಲಾಟೆಯ ಬಗ್ಗೆ ಅವರ ಮನಸ್ಸಿಗೆ ನೋವುಂಟಾಗಿ ಅವರು ನೊಂದುಕೊಂಡಿದ್ದರೆ, ನಿನ್ನೆಯಿಂದ ಅಗಿರುವುದು ಅಚಾತುರ್ಯವಾಗಿದೆ ಎಂಬ ಭಾವನೆ ಅವರಲ್ಲಿ ಇದ್ದರೆ ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಆದರೆ ಒಂದು ಅಂಶ ತಮ್ಮಲ್ಲಿ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ನಮ್ಮಲ್ಲಿ ಕೆಲವರು ಯುವಕರು ಏನಿದ್ದೇವೆ ನಮ್ಮಗಳಿಗೆ ನಿಮ್ಮ ಕರುಣೆ ಇನ್ನೂ ಹೆಚ್ಚಾಗಿ

ಆಗಬೇಕು, ಕಾರಣವೇನೆಂದರೆ ನಮ್ಮ ಮುಖಂಡರು ಇದ್ದಾರೆ, ಅವರು ಎದ್ದಾಗ ಅಥವಾ ಆ ಕಡೆಯಿಂದ ಜೈಪುರಿ ಬೆಂಚ್‌ನವರು ಎದ್ದಾಗ ತಕ್ಷಣ ಅವಕಾಶ ಕೊಟ್ಟು ಸಭೆಯಲ್ಲಿ ಒಳ್ಳೆಯ ವಾತಾವರಣವನ್ನು ಉಂಟು ಮಾಡಿ ಅವರ ಮಾತುಗಳನ್ನು ಠಾಲಸುತ್ತೀರಿ.

3-00 P.M.

ತಾವು ಸಭಾಧ್ಯಕ್ಷರು ಆದಮೇಲೆ, ನಮಗೆ ಮಾತನಾಡಲು ಅವಕಾಶ ಸಿಗಬೇಕಾದರೆ ಬಹಳ ಹೊತ್ತು ಕಾದು ನಾವು ಆ ಅವಕಾಶವನ್ನು ಪಡೆಯಬೇಕು. ಆ ಕಡೆಯವರು ಆ ರೀತಿ ಕೇಳುವುದಿಲ್ಲ ಎಂಬ ಅಭಿಪ್ರಾಯ ತಮಗೆ ಬಂದಿದೆ. ಈಗ ಆ ರೀತಿಯಾಗಿದೆ. ಮಾನ್ಯ ಶ್ರೀ ಬಾಳಿಗಾ ಅವರು ಇದ್ದಾಗ್ಗೆ ನಾವು ನಿಂತಕೂಡಲೇ ನಾವು ಹೇಳುವ ಎರಡು ವಾಕ್ಯಗಳನ್ನು ಅವರು ನಮ್ಮ ಮೇಲಿನ ಕರುಣೆಯಿಂದ ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದರು. ಒಳ್ಳೆಯ ಸೌಜನ್ಯದಿಂದ ಪದಗಳನ್ನು ಪ್ರಯೋಗ ಮಾಡುತ್ತಿದ್ದರು. ಅದಕ್ಕೆ ಮಾನ್ಯ ಸಭಾಧ್ಯಕ್ಷರು ನಮ್ಮ ಮೇಲೆ ಹೆಚ್ಚಿನ ಕರುಣೆಯನ್ನು ಇಟ್ಟುಕೊಳ್ಳಬೇ ಇರುವುದು ಅವರ ಕರ್ತವ್ಯಕ್ಕೆ ಲೋಪಮಾಡಿದಂತಾಗಿದೆ. ಆದ್ದರಿಂದ ನಮ್ಮ ಯುವಕ ಸದಸ್ಯರ ಪರವಾಗಿ ನಾನು ಪ್ರಾರ್ಥನೆ ಮಾಡುವುದೇನೆಂದರೆ, ನಾವು ಯಾವಾಗ ನಿಂತರೂ ನಮ್ಮ ಮೇಲೆ ಕರುಣೆಯಿಟ್ಟು ನಮ್ಮ ಮಾತನ್ನು ಠಾಲಸಿದರೆ, ಯಾವ ತಾಪತ್ರಯವೂ ಇರುವುದಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಅನೇಕ ವರ್ಷಗಳಿಂದ ಇಲ್ಲಿ ಇದ್ದಾರೆ. ಎಷ್ಟು ಸೌಜನ್ಯದಿಂದ ಮಾತನಾಡುತ್ತಾರೆ, ಎಂತಹ ಪದಪ್ರಯೋಗಗಳನ್ನು ಮಾಡುತ್ತಾರೆ, ಅದು ನಮಗೂ ಮತ್ತು ಅವರಿಗೂ ಒಳ್ಳೆಯ ಪರಂಪರೆಯನ್ನು ಕೊಡುವ ರೀತಿಯಲ್ಲಿರುತ್ತದೆ. ಒಳ್ಳೆಯ ನರಣಿ, ಬಹಳ ಕರುಣೆಯಿಂದ ಅವರು ಮಾತನಾಡುತ್ತಾರೆ. ನಾನು ಈವೊತ್ತು ಯುವಕ ಸದಸ್ಯರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿರೂಪಿಸಿಕೊಳ್ಳಬೇಕಾಗಿದೆ. ಅವರು ಎಷ್ಟು ಜವಾಬ್ದಾರಿಯನ್ನು ಇಟ್ಟುಕೊಂಡಿದ್ದಾರೋ ಅಷ್ಟು ನಮಗೂ ಇದೆ. ಅದೇ ರೀತಿಯಾಗಿ ನಾವು ಅವರ ಬಗ್ಗೆ ಘನತೆ ಗೌರವಗಳನ್ನು ಇಟ್ಟು ಕೊಂಡಿದ್ದೇವೆ. ತಾವು ರಿಜೈರ್ ಆದರೂ ಕೂಡ ನಾವು ಈ ಸಭೆಯನ್ನು ಮಾಡಿಕೊಂಡು ಹೋಗಬಲ್ಲೆವೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಆದ್ದರಿಂದ ಈ ಸಭೆಯಲ್ಲಿ ನಮ್ಮ ಬಗ್ಗೆ ತಾವು ಸರ್ವಾಧಿಕಾರದಿಂದ ವರ್ತಿಸದೆ, ಚುನಾಯಿತ ಪ್ರತಿನಿಧಿಗಳು ಹೇಳುವ ಸ್ಟೇಟ್‌ಮೆಂಟ್ ಮತ್ತು ಕೇಳಿಕೆಗೆ ಅವಕಾಶ ಇರುವ ರೀತಿಯಲ್ಲಿ ವರ್ತಿಸಿ ಅವರನ್ನು ಸಹೃದಯದಿಂದ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಬಹಳ ತಾಪತ್ರಯವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I quite appreciate the feelings expressed by the hon. member Sri Nanje Gowda. I shall look to them with sympathy. I assure Sri Nanje Gowda and all members, particularly the young members, that my sympathies are always with them. The difficulty arises when rules are infringed. It then becomes difficult not only for me but whoever occupies the Chair to conduct the proceedings in an orderly manner. During my predecessor's Speakership also there were intolerable scenes in this House and we all know what a nerve-racking experience he had. I can hardly express to what extent the proceedings of this House yesterday had a nerve-racking effect upon me. If there is discipline, I assure all hon. members that they will have my full sympathy. I never make a distinction between one member and another and I wish that the young members should become great parliamentarians. But they should be very well disciplined and should respect the Chair. They do everything with the permission of the Chair I find that much time is lost unnecessarily and that many things are taking place not in accordance with the rules. Should we not work at least for one hour seriously out of the six hours ? I may assure the hon. members that I shall be one with them in respecting the rules and in giving opportunities to all the members, young and old, alike without making any distinction.

Calling attention to a matter of urgent public importance *re*: Unsatisfactory supply of foodgrains in Bangalore City.

Sri T. R. SHAMANNA (Fort).—Sir, I call the attention of the Minister of State for Food and Civil Supplies to the inadequate and unsatisfactory supply of foodgrains to the residents of Bangalore.

†Sri B. VITHALDAS SHETTY (Minister of State for Food and Civil Supplies).—Sir, my attention has been called to the inadequate supply of foodgrains in Bangalore City.

Hon. members are aware that there is no statutory rationing in Bangalore City, that there is no restriction on the flow of foodgrains into the city and that the consumers are free to buy any quantity of foodgrains from dealers. What is abtaining is only Informal Rationing, under which issues are made to the public depending upon the stocks of foodgrains available with the Government, to supplement the availability in the open market at reasonable prices.

The rice that we have been making available through the public distribution system is from (a) allotments from the Government of India from the Central pool and (b) paddy procured within the State. The Central allotments have been stopped from August 1968. We had, therefore, to depend entirely on internal procurement of paddy for sustaining the public distribution system. By the end of December 1968, practically all the rice stocks with Government from earlier procurement were exhausted and, in the absence of any allotment of rice by the Central Government, we had perforce to reduce the scale of issues of rice in Bangalore City. Procurement under the Paddy Levy Order for the 1968-69 season no doubt commenced in November last year and by now we have built up a sizeable stock of about 80,000 tonnes of paddy. But the procured paddy being wet, it will take some time before it is milled and made available through the public distribution system. In the circumstances, I made a special request to the Government of India for an emergent allotment of 5,000 tonnes of rice and I am glad to inform the House that they have done so. As a result, we have been able to enhance the issues from 50 per cent to 75 percent of the normal issues.

I should like to point out here that the policy of the Government is so to adjust the distribution that we are in a position to make liberal issues though the Fair Price Shops at a time when the ruling prices in the open market are high and the consuming public is really in need of such issues at reasonable prices. At present no such exigency exists. I may be permitted to say that this being the post-harvest season, there is an easy availiability of grains in the market and the ruling prices are also not high, particularly on account of a good harvest. In fact, the current ruling prices are much less than those prevailing at the corresponding period last year. The House will agree with me that it would be prudent to conserve the stocks of rice available with the Food Department for issue during the lean months to come.

While we are not wholly satisfied with the quality of rice issued through Fair Price Shops, I would like to mention that a number of steps have been taken to improve the quality. Strict instructions have been given to the staff at all levels to pay particular attention to quality control at procurement, milling and distribution points. All the retail agents have been instructed to return any sub-standard rice that they may receive from the wholesalers and the Department has made arrangements for replacing such stocks by good quality grains. So far as wheat is concerned, it cannot be admitted that wheat is generally bad, even though the allotments now being received in the State are from the older stocks held by the Government of India. Nonetheless instructions have been issued to the concerned people that wheat should be issued to retailers only after due cleaning wherever necessary. Retailers have also been advised to return any bad quality stock of wheat which they might have received in spite of these instructions and to take back good grains.

Because of the liberal allotment of wheat by the Government of India in the last few months, we have built up a comfortable stock of wheat and are now in a position to make liberal issues. The quantity of wheat issued from the Fair Price Shops has been doubled and consumers are enabled through special permits to make bulk purchases of wheat to the extent of one quintal per card per month. Wheat products like maida and sojee are also available in plenty in the Fair Price Shops as well as in the open market. This should more than make up the shortfall in the issues of rice.

Hon'ble Members are aware that till the month of November 1967, the entire production of sugar in the country was controlled and was availeble for issues by the Government. The State Government, at that time, used to get a monthly allotment of 7,938 tonnes of sugar. We were issuing this sugar not only to domestic consumers, but also to bulk consumers and industries. Subsequent to the partial decontrol of sugar, under which 40 per cent of the production was released for the open market, the State Government's allotment was reduced to 5,036 tonnes. As a result of this reduction, we wereforced to confine the issues of sugar primarily to domestic consumers and leave others to buy their requirement from the open market. As a result, we were able to maintain the issues to card-holders at the same level as before.

From the sugar-month January-February 1969, the allotment to the State has been increased to 6,387 tonnes per month. We have, therefore, been able to issue an extra kg. of sugar per card per month in Bangalore City. Additional requirements will perforce have to be met by purchases in the open market where it is freely available. It would be appreciated that the scale of issue of sugar through the Fair Price Shops would depend on the allotments made by the Government of India to the State.

Papers laid on the Table

Sri RAMAKRISHNA HEGDE (Minister for Finance, Planning and Youth Welfare).—I beg to lay Notification No. HD 24 EFL 68 dated 16th January 1969—The Mysore Excise (Manufacture of Wines from Grapes) Rules, 1968 under sub-section (4) of Section 71 of the Mysore Excise Act. 1965.

Sri H. V. KOUJALGI (Minister for Revenue).—I beg to lay Order No. RD 33 GST 62 dated 18th February 1969 Reduction or Remission of Stamp duties chargeable under sub-section (2) of Section 9 of the Mysore Stamp Act, 1957.

Mr. SPEAKER.—The Notification and the order are laid on the Table.

Sri RAMAKRISHNA HEGDE.—Sir, on behalf of the Minister for Industries, Information and Publicity, I beg to lay Annual Report for 1967-68—Tungabhadra Steel Product Limited, Bellary, under section 619 (A) of the Companies Act, 1956.

Mr. SPEAKER.—The Report is laid on the Table.

Budget Estimate for 1969-70
General Discussion

(Debate Continued)

Mr. SPEAKER.—Now, the General Discussion on the Budget Estimates will continue. Sri T. R. Shamanna will continue his speech.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ಮೊನ್ನೆ ಮಾತನಾಡುತ್ತಾ ಬೆಂಗಳೂರು ನಾಗರೀಕರಿಗೆ ಒದಗಬೇಕಾಗಿದ್ದ ಉಚಿತ ನೀರಿನ ಸೌಲಭ್ಯ 1965 ರಿಂದಲೂ ಜಾರಿಗೆ ಬರಬೇಕೆಂದು ಹೇಳುತ್ತಿದ್ದೆ. ಅದಕ್ಕೆ ಕಾರಣವಾದರೂ ಇಷ್ಟೆ, ಮನೆ ಕಂದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ಉಚಿತ ನೀರನ್ನು ಕೊಡುವ ಉದ್ದೇಶದಿಂದ 1965ರಲ್ಲಿ ಹಾಕಿದರು. ಆದರೂ ಸಹ ವಿನಾಕಾರಣವಾಗಿ ನೀರಿನ ದರವನ್ನು 1965ರಿಂದ ಹೆಚ್ಚು ಮಾಡಿದ್ದಾರೆ. ಇದು ಸರಿಯಲ್ಲ. ಈಗ ಕೊಟ್ಟಿರುವ ಉಚಿತ ನೀರಿನ ಸೌಲಭ್ಯವನ್ನು 1965ರಿಂದಲೂ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆ ಮಾಡಬೇಕಾದ ಅವಶ್ಯಕತೆ ನನಗೆ ಕಾಣುತ್ತಿಲ್ಲ.

ಇನ್ನು ದೇಶದ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ಹಿತಕರವಾಗಿಲ್ಲ. ಹಣಕಾಸಿನ ಉಳಿತಾಯದ ಬಗ್ಗೆ ಸಾಧ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದಕ್ಕೆ ಮತ್ತು ಹಣಕಾಸಿನ ವ್ಯವಸ್ಥೆಯನ್ನು ನಿರಪಡಿಸುವುದಕ್ಕೆ ಮಂತ್ರಿಮಂಡಲದವರು ಸೂಕ್ತವಾದ ಕ್ರಮವನ್ನು ತೆಗೆದು ಕೊಳ್ಳುತ್ತಾರೆಂಬ ಭರವಸೆ ನನಗಿದೆ. ಕಳೆದ ಎರಡು ದಿನಗಳಿಂದ ನುಭಾಸ್ ನಗರದ ಭೂಮಿಯ ಬಗ್ಗೆ ಚರ್ಚೆ ನಡೆದಿದೆ. ಈ ಜಾಗ 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆ ಬಾಳುತ್ತದೆ. ಈ ಜಾಗವನ್ನು ಪರೀಪಾರಿ ಮಾಡುವ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆ ಮತ್ತು ಮಾತು ಕತೆಗಳು ನಡೆದಿವೆ. ಇದರ ಔಚಿತ್ಯದ ಬಗ್ಗೆ ನಾನು ಹೋಗುವುದಿಲ್ಲ. ನನ್ನ ಒಂದು ಸಲಹೆ ಎಂದರೆ ಬೆಂಗಳೂರು ನಗರಕ್ಕೆ ಹೊರಗಿನಿಂದ ಅನೇಕ ಪ್ರಯಾಣಿಕರು ವ್ಯಾಪಾರಕ್ಕಾಗಿ, ಕೋರ್ಟು ಕಛೇರಿಗಳ ಕೆಲಸಕ್ಕಾಗಿ ಬರುತ್ತಾರೆ. ಅನೇಕ ವಿದ್ಯಾರ್ಥಿಗಳು ಹೊರಗಡೆಯಿಂದ ಬೆಂಗಳೂರಿಗೆ ಬಂದರೆ ಇಳಿದುಕೊಳ್ಳುವುದಕ್ಕೆ ಸಾಕಷ್ಟು ಜಾಗವಿಲ್ಲ. ಆದ್ದರಿಂದ ಈ ಜಾಗದಲ್ಲಿ ಸರ್ಕಾರದ ಮುಖೇನ ವಸ್ತುಪ್ರದರ್ಶನವನ್ನು ಏರ್ಪಡಿಸಲು ಮಳಿಗೆಗಳನ್ನು ಕಟ್ಟಿಸಬೇಕು. ಈ ಮಳಿಗೆಗಳ ಮೇಲೆ